ಶ್ರೀ ಆರ್. ಅಂಬಣ್ಣ ನಾಯಕ್.—ಮಾನ್ಯ ಅಧ್ಯಕ್ಷರೇ, ೧೯೮೦ರ ನವೆಂಬರ್ ತಿಂಗಳಿಂದ ೧೯೮೨ರ ಜನವರಿ ತಿಂಗಳವರೆಗೆ ರಾಜ್ಯ ಸರ್ಕಾರದ ವಿಚಕ್ಷಣ ದಳದ ಬಲಿಗೆ ೧೦೨ ಅಧಿಕಾರಿಗಳು ಸಿಲುಕಿದ್ದಾರೆಂದು ತಿಳಿಸಿ ಅದರಲ್ಲಿ ೫೪ ಮಂದಿಯನ್ನು ಅಮಾನತ್ತಿನಲ್ಲಿ ಇಡಲಾಗಿದೆಯೆಂದು ತಿಳಿಸಿದ್ದೀರಿ. ಇಷ್ಟು ವಿಳಂಬವಾಗುವುದಕ್ಕೆ ಕಾರಣವೇನು ಮತ್ತು ಉಳಿದವರ ಮೇಲೆ ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಹೇಳಿಕೊಳ್ಳುವಷ್ಟು ವಿಳಂಬವಾಗಿಲ್ಲ. ಒಟ್ಟು ಮಾಹಿತಿ ಸಂಗ್ರಹಿಸಿ ಕೇಸ್ ನಡೆಸಬೇಕಾದರೆ ಇದಕ್ಕೆಲ್ಲಾ ಕಾನೂನು ಪ್ರಕಾರ ನಡೆದುಕೊಳ್ಳಬೇಕು. ಇದನ್ನು ಬೇಕು ಎಂದು ಏನೂ ವಿಳಂಬ ಮಾಡುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಸರ್ಕಾರಕ್ಕೂ ಇದರಲ್ಲಿ ಹೆಚ್ಚಿನ ಆಸಕ್ತಿ ಇದೆ. ಆದಷ್ಟು ಬೇಗ ಇದನ್ನು ಕೋರ್ಟಿನ ಮುಂದೆ ತರಬೇಕು ಎನ್ನುವುದೇ ಸರ್ಕಾರದ ಉದ್ದೇಶವಾಗಿರುತ್ತದೆ. ಆದರೆ ಪ್ರೊಸೀಜರಲ್ ಡಿಲೇ ಆಗಿದೆ. ಕಾನೂನು ಪ್ರಕಾರವಾಗಿ ಏನು ಮಾಡಬೇಕೋ ಅದನ್ನು ಮಾಡಬೇಕಾಗಿರುವುದರಿಂದ ಸ್ವಲ್ಪ ನಿಧಾನವಾಗಿದೆ ಅದು ಮುಗಿದ ನಂತರ ಕ್ರಮ ಕೈಗೊಳ್ಳುತ್ತೇವೆ.

Community Irrigation Wells in Kunigal Taluk

619 SRI D.T. MAYANNA (Huliyurdurga) --Will the Minister for Rural Development and Panchayat Raj be pleased to state.—

(a) the names of Villages where the Community Irrigation Wells are constructed by the Taluk Development Board, Kunigal Taluk, Tumkur District ;

(b) the amount spent for the said Wells and the extent of lands to be irrigated ;

(c) out of this the number of wells installed with the electric pumps ;

(d) whether at present the Ryots are cultivating the Lands by using the water from these irrigated pumps ;

(e) what are the reasons, if the cultivation is not being done by using water from these pumpsets ?

(Details may please be furnished)

SRI B. RAMAIAH (Minister for Rural Development and Panchayat Raj.—

(a) 1. Devarakannasandra
2. Singanahalli
3. Doddamadure
4. Devasandra
5. R. Byadarahalli
6. Kalihalli (K. Byadrahalli)
7. Yelakadakallu
8. Rajagere
9. Jaladagere
10. Uchhani
11. Gunnagara
12. Thattasandra
13. Tharadakuppe
14. Lambanithanda

(b)		Amount Spent Rs.	Extent of Land Acres	Guntas
1.	Devarakanna Sandra	18,814-25	1	10
2.	Singanahalli	18,543-25	12	00
3.	Doddamadure	15,435-74	9	04
4.	Devasandra	24,044-56	10	15
5.	R. Byadarahalli	23,632-69	7	24
6.	Kalihalli (K. Byadarahalli)	19,198-50	10	00
7.	Yelakadakallu	23'632-00	6	00
8.	Rajagere	30,047-00	6	15
9.	Jaladagere	25,774-46	4	14
10.	Uchhani	25,839-90	13	37

Community Irrigation Wells of Scheduled Castes/Schduled Tribes People

11.	Gunnagara	41,512-15	18	16
12.	Thattasandra	35,598-22	6	15
13.	Tharadakuppe	44,270-00	12	34
14.	Lambanithanda	44,270-00	27	17

(c) Three Villages namely (i) Kalihalli (K. Byadarahalli) (ii) Yelakadakallu. (iii) Taradakuppe have not been electrified. The remaining II Villages have been installed with pumpsets.

(d) (I) Kalihalli (K. Bydarahalli), (2) Yelakadakallu, (3) Jaladagere, (4) Tharadakuppe, these four Villages are not cultivating. The remaining 10 Villages are cultivating.

(e) Steps have been taken to supply electricity to Yelakada Kallu Tharadakuppe Villages. The Department do not agree for supply of Electricity as the Kalihalli (K. Bydarahalli) is far away.

Jaladagere.—Matter is under litigation in the court of law.

Devarakannasandra.—Cultivating, power supply has been stopped as the achcutdar have not paid the electricity charges bill. The amount outstanding is Rs. 2,343-36.

Singanahalli.—Cultivating Electricity charges bill amounting Rs. 1552-68 has not been paid.

Doddamadure.—The ryots are not coming forward to use this water as the well is within the achcut of the tank.

Devasandra.—Cultivating Powers supply has been stopped due to non-payment of electricity Bill of Rs. 2,311-66.

R. Byadrahalli.—Cultivating power supply has been stopped due to non-payment of electricity bill.

Rajagere.—Achcutdaras are paying the bill regularly and using the water.

Uchhani, Gunnagara, Thattasandra.—Achcutdars are paying the bill regularly and reaping the crops. Water is not sufficient. Committee has been formed regarding management.

Lambanithanda.—Achcutdars are getting the benefits without payment of electricity charges Bill.

ಶ್ರೀ ಡಿ.ಟಿ. ಮಾಯಣ್ಣ.—ಸುಮಾರು ೧೪ ಸಾಮೂಹಿಕ ಭಾವಿಗಳು ಇವೆ ಎಂದು ಹೇಳಿದ್ದೀರಿ ಆದರಲ್ಲಿ ೩-೪ ಭಾವಿಗಳಿಗೆ ಪಂಪ್‌ಸೆಟ್ಟನ್ನು ಹಾಕಿಲ್ಲವೆಂದು ಹೇಳಿದ್ದೀರಿ. ೧೯೭೩ನೇ ಇಸವಿಗಿಂತ ಮೊದಲು ಇದ್ದ ಭಾವಿಗಳು ಎಷ್ಟು ? ಮತ್ತು ಇಷ್ಟು ದಿವಸದ ವರೆಗೆ ಈ ಭಾವಿಗಳಿಗೆ ಪಂಪ್‌ಸೆಟ್ ಹಾಕದೇ ಇರುವುದಕ್ಕೆ ಕಾರಣವೇನು ?

ಶ್ರೀ ಬಿ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕಾಣಿಗಲ್ ತಾಲ್ಲೂಕಿನಲ್ಲಿ ೧೪ ನೀರಾವರಿ ಬಾವಿಗಳನ್ನು ಒದಗಿಸಿದ್ದೇವೆ. ಅವರಲ್ಲಿ ಸುಮಾರು ೧೦ ಬಾವಿಗಳ ಪಂಪ್‌ಸೆಟ್‌ಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಇದರಿಂದ ಅಲ್ಲಿಯ ಕೃಷ್ಣ ರೈತರು ಪ್ರಯೋಜನ ಪಡೆಯುತ್ತಿದ್ದಾರೆ. ಇನ್ನು ೪ ಭಾವಿಗಳಲ್ಲಿ ೩ ಭಾವಿಗಳಿಗೆ ವಿದ್ಯುಚ್ಛಕ್ತಿ ಕೊಡುವ ವಿಷಯವಲ್ಲಿ ಹೇಳುವುದಾದರೆ ಆ ಭಾವಿಗಳಿಗೆ ವೈರ್ ಲೈನ್ ಎಳೆಯುವ ವಿಚಾರದಲ್ಲಿ ತಕರಾರು ಬಂದಿತ್ತು, ಇದರಿಂದ ಆ ಕೆಲಸ ಉಳಿದಿದೆ. ಅದನ್ನು ಸಹ ಹಾಕಿಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಇನ್ನೊಂದು ಭಾವಿಯ ವಿಚಾರ ಕೋರ್ಟಿಗೆ ಹೋಗಿರುವುದರಿಂದ ಸ್ಥಗಿತಗೊಂಡಿದೆ.

ಶ್ರೀ ಡಿ.ಟಿ. ಮಾಯಣ್ಣ.—ನಮ್ಮ ಇಲಾಖೆಯವರಿಂದ ಸ್ಯಾಂಕನ್ ಆಗಿ ಒಂದು ವರ್ಷವಾಗಿದೆ ಆದರೆ ವಿದ್ಯುಚ್ಛಕ್ತಿ ಇಲಾಖೆಯವರು ಕೆಲವು ಸಲಕರಣೆಗಳು ಇಲ್ಲವೆಂದು ವಿಳಂಬ ಮಾಡುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ತಾವು ವ್ಯವಹರಿಸಿ ಕೂಡಲೇ ಅಲ್ಲಿಗೆ ವ್ಯವಸ್ಥೆ ಮಾಡಿಸುತ್ತೀರಾ ?

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರ ಕಳಕಳಿ ನಮಗೂ ಅರ್ಥವಾಗುತ್ತದೆ. ನಮ್ಮ ಭಾಗದ ಕೆಲಸ ಪೂರ್ಣವಾಗಿದೆ. ವಿದ್ಯುಚ್ಛಕ್ತಿ ಇಲಾಖೆಯವರು ಅಲ್ಲಿಗೆ ಲೈನ್ ಎಳೆಯಲು ಕಂಬಗಳು ಇಲ್ಲ ಎನ್ನುವ ತೊಡಕನ್ನು ಹೇಳಿದರು ಇದರ ಬಗ್ಗೆ ನಾವು ಈಗಾಗಲೇ ಸಾಕಷ್ಟು ಪ್ರಯತ್ನ ಪಟ್ಟು ನಮ್ಮ ಕೈಲಾದ ಕಾರ್ಯವನ್ನು ಮಾಡುತ್ತಿದ್ದೇವೆ.

ಶ್ರೀ ಡಿ.ಟಿ. ಮಾಯಣ್ಣ.—ನೀವು ಏನೋ ಭಾವಿ ತೋಡಿಸಿ ಪಂಪ್‌ಸೆಟ್‌ನ್ನು ಹಾಕಿಸಿ ಕೊಟ್ಟಿದ್ದೀರಿ. ಆದರೆ ಇವತ್ತಿನ ದಿವಸ ಯಾರು ನೀರನ್ನು ಉಪಯೋಗಿಸುತ್ತಿದ್ದಾರೆ ಅವರು ವಿದ್ಯುಚ್ಛಕ್ತಿಯ ಬಿಲ್ಲನ್ನು ಕಟ್ಟುತ್ತಿಲ್ಲ. ಆದಕ್ಕಾಗಿ ತಾವು ನೀರಿನ ಕಮಿಟಿ ಎಂದು ಸಹ ಮಾಡಿದೇ ಇರುವುದರಿಂದ ವಿದ್ಯುಚ್ಛಕ್ತಿಯ ಬಿಲ್ಲನ್ನು ವಸೂಲಿ ಮಾಡುವುದಕ್ಕೆ ತೊಂದರೆ ಯಾಗಿದೆ. ಬಿಲ್ಲನ್ನು ಕಟ್ಟದಿದ್ದರೆ ವಿದ್ಯುಚ್ಛಕ್ತಿಯನ್ನು ಅವರು ನಿಲ್ಲಿಸಿ ಬಿಡುತ್ತಾರೆ. ಆದುದರಿಂದ ವಿದ್ಯುಚ್ಛಕ್ತಿಯ ಚಾರ್ಜಸ್ ಏನು ಬರುತ್ತದೆ ಅವನ್ನು ತಕ್ಷಣವೇ ಕಲೆಕ್ಟ್ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುವುದಕ್ಕೆ ಒಂದು ಕಮಿಟಿಯನ್ನು ತಕ್ಷಣವೇ ಮಾಡುತ್ತಿರಾ ?

ಶ್ರೀ ಬಿ. ರಾಮಯ್ಯ.—ಆ ಭಾಗದಲ್ಲಿ ಈ ಒಂದು ಸಮಸ್ಯೆ ಬಂದಿತ್ತು. ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡರೂ ವಿದ್ಯುಚ್ಛಕ್ತಿಯ ಬಿಲ್ಲನ್ನು ಕಟ್ಟುತ್ತಿರಲಿಲ್ಲ ಎನ್ನುವುದು ನಮ್ಮ ಗಮನಕ್ಕೂ ಬಂತು ಇದನ್ನು ಪರಿಶೀಲನೆ ಮಾಡಿ ಆ ಭಾಗದಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದ್ದೇವೆ ಈಗಾಗಲೇ ಅದು ಕಾರ್ಯಪ್ರವೃತ್ತವಾಗಿದೆ.